**<u>ದಿನಾಂಕಃ 21.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜಿ ಎಸ್ ವಕೀಲರಿಂದಃ</u>**

ನಾನು ಬಸ್ ಕಂಡಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಬಸ್ ಕಂಡಕ್ಟರ್ ಆಗಿ ಕೆಲಸ ಮಾಡುವ ಬಗ್ಗೆ ಗುರುತಿನ ಚೀಟಿ ಅಥವಾ ಲೈಸೆನ್ಸ್ ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಅಪಘಾತವು ಕಮರವಾಡಿ ಗೇಟ್ ಬಳಿ ಆಗಿರುತ್ತದೆ. ಅಪಘಾತ ಆದ ನಂತರ ನಾನು ಟಿ ನರಸೀಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

**ಎಂ.ವಿ.ಸಿಃ 182/2020** **ಪಿಡಬ್ಲೂ-1 ಉಮೇಶ್**

ಅಪಘಾತ ಆದ ನಂತರ ನನಗೆ ಜ್ಞಾನ ಇತ್ತು ಎಂದರೆ ಸರಿ. ವೈದ್ಯರ ಬಳಿ ನನಗೆ ಯಾವ ಯಾವ ಗಾಯಗಳಾಗಿರುತ್ತವೆ ಎಂದು ಹೇಳಿ ಬರೆಸಿರುತ್ತೇನೆ. ಅಪಘಾತದಿಂದ ನನ್ನ ಎಡಗೈ ಭುಜದ ಮೂಳೆ ಮುರಿದಿರುತ್ತದೆ ಮತ್ತು ತಲೆಗೆ ಗಾಯವಾಗಿರುತ್ತದೆ. ನಾನು ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆಯಲ್ಲಿ ನನಗೆ ಸಂತೋಷ್ ಎಂಬ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ. Discharge Certificate ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿ. 6 ತಿಂಗಳುಗಳ ಕಾಲ ವಿಶ್ರಾಂತಿ ಪಡೆದುಕೊಳ್ಳುವಂತೆ ವೈದ್ಯರು ನನಗೆ ಲಿಖಿತವಾಗಿ ಬರೆದುಕೊಟ್ಟಿಲ್ಲ ಎಂದರೆ ಸರಿ. ನಿಪಿ 8 ರ ವೈದ್ಯಕೀಯ ಬಿಲ್ಲುಗಳನ್ನು ಹೊರತುಪಡಿಸಿ ನನ್ನ ಬಳಿ ಬೇರೆ ವೈದ್ಯಕೀಯ ಬಿಲ್ಲುಗಳು ಇಲ್ಲ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಲ್ಲ ಎಂದರೆ ಸರಿ. ನಾನು ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿಲ್ಲ ಮತ್ತು ನ ನಗೆ ಶಸ್ತ್ರಚಿಕಿತ್ಸೆ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಆಗಿರುವ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ನನಗೆ ಮೂಳೆ ಮುರಿದಿರುವ ಬಗ್ಗೆ X-ray ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ನನ್ನ ಜನ್ಮ ದಿನಾಂಕದ ಬಗ್ಗೆ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆದುಕೊಳ್ಳುವ ಸಲುವಾಗಿ ಮೂಳೆ ಮುರಿದಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆದುಕೊಳ್ಳುವ ಸಲುವಾಗಿ ಕೆಲಸ ಮಾಡಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.
ಓ ಹೇ ಕೇ ಸರಿ ಇದೆ

1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಚಾಮರಾಜನಗರ.